


**ಡಾ. ಸಾತ್ಯಕಿ ನಂಬಳ**

ಊರು: ನಂಬಳ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

- ಮೈಸೂರು ವಿಶ್ವವಿದ್ಯಾಲಯದ ಜೆಎಸ್‌ಎಸ್ ಮೆಡಿಕಲ್ ಕಾಲೇಜ್‌ನಿಂದ ಎಂಬಿಬಿಎಸ್ ಪದವಿ.
- ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್‌ನಿಂದ (MS) ವೈದ್ಯಕೀಯ ಸ್ನಾತಕೋತ್ತರ ಪದವಿ.
- ಸಾಗರದಾಚೆಗಿನ ಹಾರ್ವರ್ಡ್‌ಗೂ ಪಯಣ. ಬ್ರಿಗಾಂ (Brigham) ಅಂಡ್ ವುಮೆನ್ಸ್ ಹಾಸ್ಪಿಟಲ್ ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಬೊಸ್ಟನ್, ಅಮೆರಿಕದಲ್ಲಿ ಸೀನಿಯರ್ ಕ್ಲಿನಿಕಲ್ ಫೆಲೋ (ಕಾರ್ಡಿಯಾಕ್ ಸರ್ಜರಿ ವಿಭಾಗ)
- ಪೀಟರ್ ಮುಂಕ್ ಕಾರ್ಡಿಯಾಕ್ ಸೆಂಟರ್, ಟೊರೊಂಟೊ ಜನರಲ್ ಹಾಸ್ಪಿಟಲ್ ಟೊರೊಂಟೊ, ಕೆನಡಾ ಮತ್ತಿತರ ದೇಶ ವಿದೇಶದಲ್ಲಿ ಉನ್ನತ ಅಧ್ಯಯನ, ಕೆಲಸದ ಅನುಭವ.

ಸೇವಾ ಸಾರ್ಥಕ್ಯವನ್ನು ಕಾಣುವ ಹಂಬಲದಿಂದ ಇಲ್ಲಿಗೆ ಬಂದು ದಶಕವೇ ಸಂದಿದೆ. ಸಾವಿರಾರು ಹೃದಯಗಳಿಗೆ ವಿನೂತನವಾದ ಅತ್ಯಾಧುನಿಕ ವಿಧಾನದ ಸರ್ಜರಿಯನ್ನು ಯಶಸ್ವಿಯಾಗಿ ಮಾಡಿದ ತೃಪ್ತಿ ಇದೆ. ಇಂಥ ಹುಡುಕಾಟ, ಕರ್ತವ್ಯ ಪಾಲಿಸಿದ ಫಲವಾಗಿ ಇವತ್ತು ನಿಮ್ಮ ಮುಂದೆ ನಿಂತಿದ್ದೇನೆ'.

ಹೀಗೆ ಮಾತುಗಳ ನಡುವೆಯೇ ಸರ್ಜನ್ ಸಾತ್ಯಕಿ, ನೀಲಿ ಬಣ್ಣದ ಓಟಿ ಬಟ್ಟೆ, ತಲೆಗೊಂದು ಟೋಪಿ ಹಾಕಿಕೊಂಡು ಆಪರೇಷನ್ ರೂಂನತ್ತ ಹೊರಡಲು ಸಜ್ಜಾದರು. 'ನನ್ನ ಜೊತೆ ಆಪರೇಷನ್ ಥಿಯೇಟರ್‌ಗೆ ನೀವೂ ಬನ್ನಿ. ದೇಹಕ್ಕೆ ಸರ್ಜರಿ, ರಕ್ತ... ಇದೆಲ್ಲ ನೋಡಲು ಆಗುತ್ತಾ? ಅಯ್ಯೋ ರಕ್ತ ಅಂತ ಗಾಬರಿಯಾಗಿ ತಲೆ ತಿರುಗಿ ಬಿದ್ದೀರಿ ಆಮೇಲೆ... ಆಗುತ್ತಾ? ಆದರೆ ಬನ್ನಿ' ಎಂದರು. 'ಸರ್, ನಾವು ಅದಕ್ಕೇ ಬಂದಿದ್ದು. ಅದೇನಾಗುತ್ತೊ ನೋಡೇಬಿಡೋಣ. ನೀವಿರುವಾಗ ಭಯವಿಲ್ಲ' ಅಂದೆವು.

ಓಟಿ ನೀಲಿ ಬಟ್ಟೆ, ತಲೆಗೊಂದು ಟೋಪಿ ಧರಿಸಿ ಸರ್ಜನ್ ಸಾತ್ಯಕಿ ಜೊತೆ ಆಪರೇಷನ್ ಥಿಯೇಟರ್‌ನತ್ತ ಹೊರಡಲು ಸಜ್ಜಾದೆವು. ಕಿರಿದಾದ ಕಿಟಕಿಯಷ್ಟಗಲದ ಗಾಜಿನ ಕಿಂಡಿಯಿಂದ ಥಿಯೇಟರ್ ಕಾಣಿಸಿತು. ಮೈ ಜುಮ್!

ಓಟಿ ಬಾಗಿಲು ತಳ್ಳಿ 'ಬನ್ನಿ ಒಳಕ್ಕೆ, ವೆಲ್ ಕಮ್ ಟು ಅವರ್ ವರ್ಲ್ಡ್' ಎನ್ನುತ್ತ ಡಾ. ಸಾತ್ಯಕಿ ನಮ್ಮನ್ನು ಆಹ್ವಾನಿಸಿದರು. ಅಬ್ಬಾ! ತಣ್ಣಗಿನ ಕೋಣೆ. ನಿಶ್ಶಬ್ದ. ಆಪರೇಷನ್ ರೂಂ ಲೈಟ್ಸ್, ಬ್ರೀದಿಂಗ್ ಸರ್ಕ್ಯೂಟ್, ಅರವಳಿಕೆ ಮಷೀನ್, ಸ್ಟೆರಿಲೈಜ್ ಆದ ಉಪಕರಣಗಳು, ಪಲ್ಸ್ ಆಕ್ಸಿಮೀಟರ್ ಮಷೀನ್, ಅಟೋಮೇಟೆಡ್ ಬ್ಲಡ್ ಪ್ರೆಶರ್ ಮೆಸರಿಂಗ್ ಮಷೀನ್, ಹಾರ್ಟ್–ಲಂಗ್ ಮಷಿನ್... ಈ ಎಲ್ಲ ಯಂತ್ರಗಳ ಕಿರ್, ಟಂಯ್ ಟಂಯ್, ಟಿಂವ್ ಟಿಂವ್ ದನಿ ಹೊರಡಿಸುವ ಬೀಪ್‌ಗಳ ಸದ್ದು. ಕಂಪ್ಯೂಟರ್ ಪರದೆಗಳಲ್ಲಿ ಸಾಗುತ್ತಿದ್ದ ಸಿಗ್ನಲ್‌ಗಳು, ಅಂಕಿ ಸಂಖ್ಯೆಗಳು, ಒಂದೆಡೆ ನೇತು ಹಾಕಿದ ಎಕ್ಸ್‌ರೇ. ಅದರ ಹಿಂಬದಿಯ ಬೆಳಕಿನಿಂದ ಕಪ್ಪು ಬಿಳುಪಿನ ಎದೆಯ ಹಂದರ ಕಾಣಿಸುತ್ತಿತ್ತು. ಅದರ ಪಕ್ಕ ಹೃದಯದ ಶಸ್ತ್ರಚಿಕಿತ್ಸೆಯ ಸಂಕ್ಷಿಪ್ತ ನೀಲನಕ್ಷೆಯಂತೆ ಗುರುತು ಹಾಕಿಕೊಂಡ ಚೀಟಿ.

ಬೆಳಕಿನ ತಟ್ಟೆಯಂತಹ ಆಪರೇಷನ್ ರೂಂ ಲೈಟ್ಸ್ ಕೆಳಗೆ ಗಾಢ ನಿದ್ರೆಯಲ್ಲಿರುವಂಥ ದೇಹವೊಂದು ಅಂಗಾತ ಮಲಗಿತ್ತು. ಎದೆಯ ಭಾಗವೊಂದನ್ನು ಬಿಟ್ಟರೆ ದೇಹವಿಡೀ ನೀಲಿ ಬಟ್ಟೆಯಲ್ಲಿ ಮುಚ್ಚಿಕೊಂಡಿತ್ತು. ಎದೆಯ ಮೇಲೆ ಒಂದಷ್ಟು ಜಾಗದ ಸುತ್ತ ಪಟ್ಟಿಯಂಥದ್ದೇನೋ ಹಾಕಿದ್ದರು. ಡಾ. ಸಾತ್ಯಕಿ ದೇಹದ ಹತ್ತಿರಕ್ಕೆ ಹೋದವರೇ, 'ಎಲ್ಲ ರೆಡಿ ಏನ್ರಿ' ಎಂದು ಸಹೋದ್ಯೋಗಿಗಳ ವಿಚಾರಿಸುತ್ತ, ಎದೆಯ ಎಡಭಾಗದ ಮೊಲೆಯ ಕೆಳಗೆ ಒಂದು ಸಣ್ಣ ಛೇದ ಮಾಡಿದರು. ಮೊಗ್ಗು ಬಿರಿದುಕೊಂಡಂತೆ! ಚರ್ಮದ ಒಂದೊಂದು ಪದರನ್ನು ಸೀಳಿ ಮುಂದುವರಿಯುವಾಗ ಹೂವಿನ ಎಸಳನ್ನು ಮೆಲ್ಲಗೆ ಸರಿಸಿ ನೋಡುತ್ತಿದ್ದಾರೇನೋ ಎಂದೆನಿಸಿತು. ಹಾಗೆಯೇ ಇನ್ನೂ ಸ್ವಲ್ಪ ಒಳಕ್ಕೆ ಕುಯ್ದರು. ಚರ್ಮದ ಮತ್ತೊಂದು ಪದರು ಬಿಚ್ಚಿಕೊಂಡಿತು. ಮೆದುವಾದ ಚರ್ಬಿಯಂಥ ಮಾಂಸದ ಕವಚವನ್ನು ತಮ್ಮ ಉಪಕರಣದಿಂದ ಭೇದಿಸಿದರು. ರಕ್ತ! ಹಾಗೆಯೇ ಇನ್ನಷ್ಟು ಆಳಕ್ಕೆ ಕುಯ್ದಾಗ ದೇಹದ ಸಣ್ಣ ಭಾಗ